# ಬೂಚಿ ಬಂದಿದೆ ರಂಗ

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 37
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page no. 409
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page no. 136
4. **Note:** Lyrics given without highlights are as per Ref. 1. The wordings in Ref. 2 are same as in Ref. 1 except few words which are not considered here. The wordings in Ref. 2 and Ref. 3 are fully matching.
5. **Note:** Singer has followed lyrics as in Ref. 2.

ರಾಗ: ಪಂತುವರಾಳಿ ತಾಳ: ಏಕ

ಬೂಚಿ ಬಂದಿದೆ,
ರಂಗ ಬೂಚಿ ಬಂದಿದೆ || ಪ ||

ಚಾಚಿ ಕುಡಿದು ಸುಮ್ಮನೆ ನೀ
ಪಾಚಿಕೊಳ್ಳೊ ಕೃಷ್ಣಯ್ಯ || ಅಪ ||

ನಾಕು ಮುಖದ ಬೂಚಿಯೊಂದು
ಗೋಕುಲಕ್ಕೆ ಓಡಿ ಬಂದು
ತೋಕರನ್ನು ಎಳೆದುಕೊಂಡು
ಕಾಕು ಮಾಡಿ ಒಯ್ಯುವುದಕೆ || 1 ||

ಮೂರು ಕಣ್ಣಿನ ಬೂಚಿಯೊಂದು
ಊರು ಊರು ಸುತ್ತಿ ಬಂದು
ದ್ವಾರದಲ್ಲಿ ನಿಂತಿದೆ ನೋಡೊ
ಪೋರರನ್ನು ಒಯ್ಯುವುದಕೆ || 2 ||

ಅಂಗವೆಲ್ಲ ಕಂಗಳುಳ್ಳ
ಶೃಂಗಾರ ಮುಖದ ಬೂಚಿ
ಬಂಗಾರದಂಥ ಮಕ್ಕಳನೆಲ್ಲ
ಕಂಗೆಡಿಸಿ ಒಯ್ಯುವುದಕೆ ‖ 3 ‖

ಆರು ಮುಖದ ಬೂಚಿಯೊಂದು
ಈರಾರು ಕಂಗಳದಕೆ
ಬಾರಿ ಬಾರಿ ಅಳುವ ಮಕ್ಕಳ
ದೂರ ಸೆಳೆದು ಒಯ್ಯುವುದಕೆ ‖ 4 ‖

ಮರದ ಮೇಲೆ ಇರುವುದೊಂದು
ಕರಿ ಕರಾಳದ ಮುಖದ ಬೂಚಿ
ತರಳರನ್ನು ಎಳೆದುಕೊಂಡು
ಪುರಂದರ ವಿಠಲಗೊಪ್ಪಿಸಲಿಕೆ ‖ 5 ‖

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಯಶೋದೆ ಮಗುವನ್ನು ಹೆದರಿಸಲು ' ಬೂಚಿ ಬಂದಿದೆ ' ಎಂದು ಹೆದರಿಸಿ, ಹಾಲನ್ನು ಕುಡಿದು ಮಲಗಿಕೊಳ್ಳಲು ಹೇಳುತ್ತಾಳೆ.

**ತೋಕೂರು** = ಮಕ್ಕಳು

**ಕಾಕುಮಾಡು** = ತೊಂದರೆ ಕೊಡು

**ಕಂಗೆಡಿಸು** = ಗಾಬರಿ ಪಡಿಸು

**ಬೂಚಿ** – ಬಾವಾ , ಪೂಚಿ, ಹುಳು (ಬಾಲಭಾಷೆ); ಇಲ್ಲಿ ಸಣ್ಣ ಮಕ್ಕಳನ್ನು ಹೆದರಿಸಲು ಮಾಡಿಕೊಂಡಿರುವ ಕಾಲ್ಪನಿಕ ಪ್ರಾಣಿ.

**ಚಾಚಿ** – ಹಾಲು (ಬಾಲಭಾಷೆ).

**ಪಾಚಿಕೊಳ್ಳೊ** – ನಿದ್ರೆ ಮಾಡು.

**ನಾಲ್ಕು ಮುಖದ ಬೂಚಿ** – ಬ್ರಹ್ಮ (ಚತುರ್ಮುಖ).

**ಮೂರು ಕಣ್ಣಿನ ಬೂಚಿ** – ಶಿವ (ತ್ರಿಣೇತ್ರ).

**ಅಂಗವೆಲ್ಲ ಕಂಗಳುಳ್ಳ** – ಇಂದ್ರ (ಸಹಸ್ರಾಕ್ಷ).

**ಆರು ಮುಖದ** ಬೂಚಿ – ಸುಬ್ರಹ್ಮಣ್ಯ (ಷಣ್ಮುಖ).

**ಈರಾರು** – ಹನ್ನೆರಡು.

**ಮರದ ಮೇಲೆ ಇರುವುದೊಂದು** – ಹನುಮಂತ.

**Classification:** Keerthane
**Ankita:** Purandara Vittala
**Location:** NA
**Category:** Krishna Leele
**Sub-Category:** Krishna, yashode, ranga, gokula, makkalu, kannu, ooru, indra,
**Pravachana:** NA
**Explanation:** NA